# KARNATAKA STATE BAR COUNCIL

(Statutory Body Constituted under the Advocate Act, 1961)

ಮಿಟ್ಟಲಕೋಡ ಎಸ್. ಎಸ್
ಅಧ್ಯಕ್ಷರು

MITTALAKOD S. S
CHAIRMAN

KSBC/638/2025

ಗೆ,

ಸಂಪಾದಕರು,

____________ ಪತ್ರಿಕೆ,

ಇ-ಮಾಧ್ಯಮ,

ಬೆಂಗಳೂರು.

## ಪತ್ರಿಕಾ ಗೋಷ್ಠಿ

ಭಾರತೀಯ ವಕೀಲರ ಪರಿಷತ್ತಿನ ಸಹ ಅಧ್ಯಕ್ಷರು,ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ಹಾಗೂ ಹಿರಿಯ ವಕೀಲರಾದ ಶ್ರೀ. ಸದಾಶಿವ ರೆಡ್ಡಿಯವರ ಕಚೇರಿಯಲ್ಲಿ ದಿನಾಂಕ 16/4/2025 ರಂದು ಬೆಳಿಗ್ಗೆ ೮.೩೦ ಕ್ಕೆ ಅವರ ಮೇಲೆ ನಡೆದ ಭೀಕರ ಹಲ್ಲೆ ಮತ್ತು ದಾಳಿಯನ್ನು ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ತೀವ್ರವಾಗಿ ಖಂಡಿಸುತ್ತದೆ. ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಸದಸ್ಯರ ಪರವಾಗಿ ಹಾಗೂ ರಾಜ್ಯದ ಎಲ್ಲಾ ವಕೀಲ ಭಾಂದವರ ಪರವಾಗಿ ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷನಾದ ನಾನು, ಈ ದೌರ್ಜನ್ಯಕಾರಿ ಹಲ್ಲೆಯ ಬಗ್ಗೆ ತೀವ್ರ ಆಕ್ರೋಶ ಹಾಗೂ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ದಿನಾಂಕ 19/4/2025 ರಂದು ರಾಜ್ಯ ವಕೀಲರ ಪರಿಷತ್ತಿನಲ್ಲಿ ತುರ್ತು ಸಭೆಯನ್ನು ಕರೆದು ಈ ದುರ್ಘಟನೆಯ ಬಗ್ಗೆ ದೀರ್ಘವಾಗಿ ಚರ್ಚಿಸಿಲಾಯಿತು.

೧. ಭಾರತೀಯ ವಕೀಲರ ಪರಿಷತ್ತಿನ ಸಹ ಅಧ್ಯಕ್ಷರು, ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು ಹಾಗೂ ಹಿರಿಯ ವಕೀಲರಾದ ಶ್ರೀ. ಸದಾಶಿವ ರೆಡ್ಡಿಯವರ ಕಚೇರಿಯಲ್ಲಿ ಬೆಳಿಗ್ಗೆ ೮.೩೦ ಕ್ಕೆ ದಿನಾಂಕ 16/4/2025 ರಂದು ಅವರ ಮೇಲೆ ನಡೆದ ಭೀಕರ ಹಲ್ಲೆ ಮತ್ತು ದಾಳಿಯನ್ನು ನಡೆಸಿದ ಇಬ್ಬರು ಅಪರಿಚಿತ ವ್ಯಕ್ತಿಗಳಿಗೂ ಶ್ರೀ ಸದಾಶಿವರೆಡ್ಡಿಯವರಿಗೂ ಯಾವುದೇ ಸಂಬಂಧ ಮತ್ತು ಇವರಿಬ್ಬರ ನಡುವೆ ಯಾವುದೇ ಕಕ್ಷಿದಾರರ ಹಾಗೂ ವಕೀಲರ ಸಂಬಂಧ ಹಾಗೂ ಇನ್ನಿತರ ವ್ಯವಹಾರಗಳು ಇರುವುದಿಲ್ಲ.

Old Election Commission Office, Dr. Ambedkar Veedhi, Bengaluru - 560 001.
kar_barcouncil@yahoo.com www.ksbc.org.in 080-2286 8712/8561 8951325522

ಅಹಿತಕರ ಘಟನೆಯು ನಡೆಯುವಾಗ, ಇನ್ನೊಬ್ಬ ಅಪರಿಚಿತ ವ್ಯಕ್ತಿಯು ಈ ಘಟನೆಯನ್ನು ವಿಡಿಯೋ ರೆಕಾರ್ಡ್ ಮಾಡಿರುವುದಾಗಿ ಕಂಡುಬಂದಿರುವುದರಿಂದ, ಈ ಅಮಾನೀಯ ಕೃತ್ಯವನ್ನು ಜರುಗಿಸಲು ಯಾವುದೋ ಕಾಣದ ಕೈ ಕೆಲಸವನ್ನು ನಿರ್ವಹಿಸಿದೆಯೆಂದು ಅನುಮಾನಿಸಲಾಗಿದೆ.

ಈ ಅಮಾನವೀಯ ಘಟನೆಯನ್ನು ರಾಜ್ಯ ವಕೀಲರ ಪರಿಷತ್ತು ತೀವ್ರವಾಗಿ ಖಂಡಿಸುತ್ತದೆ ಮತ್ತು ಸಂಬಂದ ಪಟ್ಟ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಂಬಂಧಿತ ಪೋಲಿಸ್ ಅಧಿಕಾರಿಗಳಿಗೆ ಹಾಗೂ ಇತರೆ ನ್ಯಾಯಾಂಗ ತನಿಖೆಗೆ ಆಗ್ರಹಿಸುತ್ತೇನೆ. ಈ ಘಟನೆಗೆ ಸಂಬಂಧಿಸಿದಂತೆ ಸಮಗ್ರ ಸೂಕ್ತ ನಿಷ್ಪಕ್ಷಪಾತ ತನಿಖೆ ನಡೆಸಿ, ನ್ಯಾಯವನ್ನು ತ್ವರಿತವಾಗಿ ನೀಡಬೇಕು.

ಇತ್ತೀಚಿನ ದಿನಗಳಲ್ಲಿ ವಕೀಲರ ಭದ್ರತೆ ಮತ್ತು ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು ಅಗತ್ಯವಾಗಿದೆ. ಈ ಘಟನೆಯ ವಿರುದ್ಧ ರಾಜ್ಯದ ಎಲ್ಲಾ ವಕೀಲರ ಸಮೂಹ, ಎಲ್ಲಾ ವಕೀಲರ ಸಂಘಗಳು, ನಾಗರಿಕ ಸಂಘಟನೆಗಳು ಹಾಗೂ ಮಾಧ್ಯಮಗಳು ಒಗ್ಗಟ್ಟಾಗಿ ಕೈಜೋಡಿಸಬೇಕು ಹಾಗೂ ಇಂತಹ ಘಟನೆಗಳು ಪುನಃ ಜರುಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಈ ಸಭೆಯಲ್ಲಿ ಎಲ್ಲಾ ಸದಸ್ಯರ ಅನುಮತಿಯ ಮೇರೆಗೆ ದಿನಾಂಕ 21/4/2025 ಸೋಮವಾರದಂದು ರಾಜ್ಯದ ಎಲ್ಲಾ ವಕೀಲರು ತಮ್ಮ ಬಲಗೈ ತೋಳಿಗೆ ಕೆಂಪು ಪಟ್ಟಿಯನ್ನು ಧರಿಸಿ, ಸಾಂಕೇತಿವಾಗಿ ಈ ಅಹಿತಕರ ಘಟನೆಯನ್ನು ತೀವ್ರವಾಗಿ ಖಂಡಿಸಿ ಪ್ರತಿಭಟನೆ ನಡೆಸಬೇಕೆಂದು ಹಾಗೂ ತಮ್ಮ ವಕೀಲರ ಸಂಘದ ಮೂಲಕ ಈ ದುರ್ಘಟನೆಯ ಬಗ್ಗೆ ಸಂಬಂಧಪಟ್ಟ ಡಿ.ಸಿ/ಎ.ಸಿ/ ತಹಶೀಲ್ದರಗಳಿಗೆ ಮನವಿ ಪತ್ರವನ್ನು ಮೌನ ಪ್ರತಿಭಟನೆ ಮುಖಾಂತರ ಸಲ್ಲಿಸಲು ಠರಾವನ್ನು ಹೊರಡಿಸಸಲಾಗಿದೆ.

**<u>ಘಟನೆಯ ಸಾರಾಂಶ :</u>**

ದಿನಾಂಕ 16/4/2025 ರಂದು ಭಾರತೀಯ ವಕೀಲರ ಪರಿಷತ್ತಿನ ಸಹ ಅಧ್ಯಕ್ಷರು, ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು ಹಾಗೂ ಹಿರಿಯ ವಕೀಲರಾದ ಶ್ರೀ. ಸದಾಶಿವ ರೆಡ್ಡಿಯವರ ಕಚೇರಿಯಲ್ಲಿ ತಮ್ಮ ಕಿರಿಯ ಸಹದ್ಯೋಗಿಯೊಂದಿಗೆ ಕೆಲಸವನ್ನು ನಿರ್ವಹಿಸುವಾಗ ಬೆಳಿಗ್ಗೆ ೮.೩೦ ಕ್ಕೆ ಯಾರು ಅಪರಿಚಿತ ಇಬ್ಬರು ವ್ಯಕ್ತಿಗಳು ಫೈಬರ್ ಪೈಪ್ ಹಿಡಿದು

# KARNATAKA STATE BAR COUNCIL

(Statutory Body Constituted under the Advocate Act, 1961)

ಮಿಟ್ಟಲಕೋಡ ಎಸ್. ಎಸ್
ಅಧ್ಯಕ್ಷರು

MITTALAKOD S. S
CHAIRMAN


ಅವರ ಕಚೇರಿಗೆ ಏಕಾಏಕಿ ನುಗ್ಗಿ, ಜೋರಾಗಿ ಕೂಗಾಡುತ್ತಾ, ಯಾವುದೇ ಕಾರಣಗಳನ್ನು ಹೇಳದೆ ತನ್ನ ತಾಯಿ ಮತ್ತು ಡಿ. ಎನ್. ನಂಜುಂಡರೆಡ್ಡಿ ಎಂಬ ವ್ಯಕ್ತಿಯ ಬಗ್ಗೆ ಹೇಳುತ್ತಾ ಅವರುಗಳ ರಿಲೇಷನ್ ಶಿಪ್ ಬಗ್ಗೆ ತಿಳಿಸಿ ಈ ವಿಚಾರವಾಗಿ ಸುಮಾರು ಎರಡು ವರುಷಗಳ ಹಿಂದೆ ರಾಜ್ಯ ವಕೀಲರ ಪರಿಷತ್ತಿನಲ್ಲಿ ನನ್ನ ತಾಯಿ ಈಸ್ಟ್ ರೋಸ್ ಮೇರಿ ಎಂಬಾಕೆ ಬಂದು ದೂರು ನೀಡಿದ್ದು, ಆದರೆ ಸದರಿ ದೂರನ್ನು ನೀವು ನಿರಾಕರಿಸಿರುವುದಾಗಿ ಹೇಳುತ್ತಾ, ಶ್ರೀ ಸದಾಶಿವರೆಡ್ಡಿಯವರ ಕಚೇರಿಗೆ ಅತಿಕ್ರಮವಾಗಿ ಪ್ರವೇಶಿಸಿ, ಅಪರಿಚಿತ ಇಬ್ಬರು ವ್ಯಕ್ತಿಗಳ ಪೈಕಿ ಒಬ್ಬ ವ್ಯಕ್ತಿಯು ತನ್ನ ಕೈಯಲ್ಲಿ ಫೈಬರ್ ಪೈಪ್ ಅನ್ನು ಹಿಡಿದು ಮೊದಲಿಗೆ ಅವರ ತಲೆಯ ಮೇಲೆ ಗುರಿ ಇಟ್ಟು ಫೈಬರ್ ಪೈಪ್ ನಿಂದ ಅವರನ್ನು ಸಾಯಿಸಲು ಬಂದ ತಕ್ಷಣ ಶ್ರೀ ಸದಾಶಿವರೆಡ್ಡಿಯವರು ತಮ್ಮ ಜೀವ ಉಳಿಸಲು ಬಲಗೈ ಅನ್ನು ಅಡ್ಡ ಇಟ್ಟ, ಆಗ ಏಟು ಅವರ ಬಲ ಅಂಗೈಗೆ ಬಿದ್ದು ರಕ್ತ ಗಾಯಯಿತು ಪುನ: ತಲೆ ಮೇಲೆ ಗುರಿ ಇಟ್ಟು ಹೊಡೆಯಲು ಬಂದಾಗ ಅವರ ಬಲಗೈ ಮುಂಗೈಗೆ ಮೂಳೆ ಮುರಿತ ಗಾಯ ಆಗಿರುತ್ತದೆ. ಹಾಗೂ ಮುಂದುವರೆದು ಎಡ ಮೊಣಕೈ ಮತ್ತು ಎಡಾಲಿಗೆ ಸದರಿ ಫೈಬರ್ ಪೈಪ್‌ನಿಂದ ಹಲ್ಲೆ ಮಾಡಿ ರಕ್ತ ಗಾಯವಾಗಿ ಮೂಳೆ ಮುರಿತವಾಗಿರುತ್ತದೆ. ಮತ್ತು ಆ ಫೈಬರ್ ಪೈಪ್ ಅಲ್ಲಿಯೇ ಮುರಿದು ತುಂಡುಗಳಿರುತ್ತವೆ. ನಂತರ ಬೋಳಿ ಮಗನೆ, ನಿನ್ನಿಂದ ನನಗೆ ಆಸ್ತಿ ಯಾವುದು ಸಿಗಲಿಲ್ಲ, ನಿನ್ನನ್ನು ಮತ್ತು ನಿನ್ನ ವಂಶವನ್ನು ನಿರ್ವಂಶ ಮಾಡುವವರೆಗೂ ನಾನು ನಿದ್ದೆ ಮಾಡುವುದಿಲ್ಲವೆಂದು ಪ್ರಾಣ ಬೆದರಿಗೆ ಹಾಕಿರುತ್ತಾನೆ. ನಿನ್ನ ಅಮ್ಮನ್, ನಿನ್ನ ಸಾಯಿಸ್ತೀನಿ ಎಂದು ಜೋರಾಗಿ ಅವಾಜ್ ಮಾಡಿರುತ್ತಾನೆ. ಅಲ್ಲಿಂದ ವಾಪಸ್ ಹೋಗುವಾಗ ಅವನ ಮೊಬೈಲ್ ನಂಬರ್ 8197695121 ಅನ್ನು ಪೇಪರನಲ್ಲಿ ಬರೆದು ಇಟ್ಟಿರುತ್ತೇನೆಂದು ನಿನ್ನ ಕೈಯಲ್ಲಿ ಏನು ಅಗತ್ತೋ ಮಾಡಿಕೋ ಹೋಗೋ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾನೆ.

Mittalakod.S.S

( ಮಿಟ್ಟಲಕೋಡ. ಎಸ್. ಎಸ್)
ವಕೀಲರು ಮತ್ತು ಅಧ್ಯಕ್ಷರು

ದಿನಾಂಕ : 19/4/2025

ಸ್ಥಳ : ಬೆಂಗಳೂರು